**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-725/2022 **PW**: 2

**ದಿಃ 17.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಎ ಎಸ್ ಡಿ ವಕೀಲರಿಂದಃ**

1. ನನಗೆ ಪೊಲೀಸ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. ದೂರನ್ನು ಪಿರ್ಯಾದುದಾರರಾದ ಶ್ರೀಪೂರ್ಣ ನಾಯ್ಕ ರವರು ನೀಡಿರುತ್ತಾರೆಂದರೆ ಸರಿ. ಅಪಘಾತವು ಕಾರವಾರ-ಬಳ್ಳಾರಿ ಹೆದ್ದಾರಿಯಲ್ಲಿ ಆಗಿದೆ ಎಂದರೆ ಸರಿ. ಹೆದ್ದಾರಿಯಲ್ಲಿ ಯಾವದೇ ವಾಹನವನ್ನು ನಿಲ್ಲಿಸಬೇಕಾದರೂ ನಿಗದಿತ ಸ್ಥಳದಲ್ಲಿ ನಿಲ್ಲಿಸಬೇಕಾಗುತ್ತದೆಂದರೆ ಸರಿ. ಲಾರಿಯನ್ನು ರಸ್ತೆ ಮದ್ಯಭಾಗದಲ್ಲಿ ನಿಲ್ಲಿಸಿದ ಕಾರಣ ಅಪಘಾತವಾಗಿದೆ ಎಂದು ದೂರನ್ನು ನೀಡಲಾಗಿದೆ ಎಂದರೆ ಸರಿ. ಲಾರಿಯನ್ನು ಯಾವದೇ ಮುನ್ಸೂಚನೆ ಇಲ್ಲದೇ ರಸ್ತೆಯಲ್ಲಿ ನಿಲ್ಲಿಸಿದ್ದ ಕಾರಣ ಅಪಘಾತವಾಗಿದೆ ಎಂದರೆ ಸರಿ. ಲಾರಿಯು ರಸ್ತೆ ಮದ್ಯಬಾಗದಲ್ಲಿ ನಿಲ್ಲಿಸದೇ ಇದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿ. ಕಾರಿನ ಚಾಲಕನ ತಪ್ಪಿನಿಂದ ಯಾವದೇ ಅಪಘಾತವಾಗಿಲ್ಲ ಬದಲಿಗೆ ಲಾರಿಯ ಚಾಲಕನ ತಪ್ಪಿನಿಂದಾಗಿದೆ ಎಂದರೆ ಸಾಕ್ಷಿಯು ಕಾರಿನ ಚಾಲಕನು ಸಹ ಕಾರನ್ನು ವೇಗವಾಗಿ ಓಡಿಸುತ್ತಿದ್ದ ಎನ್ನುತ್ತಾರೆ.

2. ನಾನು ಶಿಕ್ಷಕಿಯಾಗಿರುತ್ತೇನೆ. ಇದೇ ವೃತ್ತಿಯನ್ನು ಮುಂದುವರೆಸುತ್ತಿದ್ದೇನೆ. ತಮಗೆ ಈಗ ಯಾವದೇ ತೊಂದರೆ ಇಲ್ಲದೇ ಮೊದಲಿನ ರೀತಿ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಸ್ವಲ್ಪ ತೊಂದರೆ ಇದೆ ಎನ್ನುತ್ತಾರೆ. ನಾನು ಸಂಬಳ ಚೀಟಿಯಲ್ಲಿ ಒದಗಿಸಿರುವ ಮೊತ್ತದಷ್ಟು ಸಂಬಳವನ್ನು ಈಗಲೂ ಸಹ ಪಡೆಯುತ್ತಿದ್ದೇನೆ. ತಾವು ಕೇವಲ ಗಳಿಕೆ ರಜೆಯನ್ನು ಪಡೆದಿದ್ದು ಯಾವದೇ ಪೇಡಲೀವ ಅಥವಾ ಲಾಸ ಆಪ್ ಪೇ ಲೀವನ್ನು ಪಡೆದಿಲ್ಲ ಎಂದರೆ ಸಾಕ್ಷಿಯು ಲಾಸ ಆಪ ಪೇ ಲೀವ ಆಗಿದ್ದು ದಾಖಲೆ ಕೊಟ್ಟಿಲ್ಲ ಎನ್ನುತ್ತಾರೆ. ತಮ್ಮ ಸಂಬಳದಲ್ಲಿ ಯಾವದೇ ಕಡತವಾಗದ ಕಾರಣ ಹಾಗೂ ತಮಗೆ ತಮ್ಮ ವೃತ್ತಿಯಲ್ಲಿ ಯಾವದೇ ತೊಂದರೆಯಾಗದ ಕಾರಣ ತಾವು ತಪ್ಪಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ತಮ್ಮ ಸಾಕ್ಷಿ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ತಿಳಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ತಮ್ಮ ಬಿಡುಗಡೆ ಸಾರಾಂಶ ಪತ್ರದಲ್ಲಿ ಯಾವದೇ ತೊಂದರೆ ಇಲ್ಲದೇ ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತೀರಿ ಎಂದು ಉಲ್ಲೇಖಿಸಲಾಗಿದೆ ಎಂದರೆ ಸರಿ.

ಸಾಕ್ಷಿ ಮುಂದುವರೆದು ಈಗಲೂ ಸಹ ನೋವು ಇದೆ ಎಂದು ನುಡಿಯುತ್ತಾರೆ. ಲಾರಿ ಚಾಲಕನ ತಪ್ಪಿನಿಂದ ಅಪಘಾತವಾಗಿರೂ ಕಾರಣ ಕಾರಿನ ವಿಮಾದಾರರು ಯಾವದೇ ರೀತಿಯ ಪರಿಹಾರ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 4 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-725/2022 **PW**: 1

**ದಿಃ 17.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಎ ಎಸ್ ಡಿ ವಕೀಲರಿಂದಃ**

**1.** ನನಗೆ ಪೊಲೀಸ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. ದೂರನ್ನು ಪಿರ್ಯಾದುದಾರರಾದ ಶ್ರೀಪೂರ್ಣ ನಾಯ್ಕ ರವರು ನೀಡಿರುತ್ತಾರೆಂದರೆ ಸರಿ. ಅಪಘಾತವು ಕಾರವಾರ-ಬಳ್ಳಾರಿ ಹೆದ್ದಾರಿಯಲ್ಲಿ ಆಗಿದೆ ಎಂದರೆ ಸರಿ. ಹೆದ್ದಾರಿಯಲ್ಲಿ ಯಾವದೇ ವಾಹನವನ್ನು ನಿಲ್ಲಿಸಬೇಕಾದರೂ ನಿಗದಿತ ಸ್ಥಳದಲ್ಲಿ ನಿಲ್ಲಿಸಬೇಕಾಗುತ್ತದೆಂದರೆ ಸರಿ. ಲಾರಿಯನ್ನು ರಸ್ತೆ ಮಧ್ಯಭಾಗದಲ್ಲಿ ನಿಲ್ಲಿಸಿದ ಕಾರಣ ಅಪಘಾತವಾಗಿದೆ ಎಂದು ದೂರನ್ನು ನೀಡಲಾಗಿದೆ ಎಂದರೆ ಸರಿ. ಲಾರಿಯನ್ನು ಯಾವದೇ ಮುನ್ಸೂಚನೆ ಇಲ್ಲದೇ ರಸ್ತೆಯಲ್ಲಿ ನಿಲ್ಲಿಸಿದ್ದ ಕಾರಣ ಅಪಘಾತವಾಗಿದೆ ಎಂದರೆ ಸರಿ. ಲಾರಿಯು ರಸ್ತೆ ಮದ್ಯಬಾಗದಲ್ಲಿ ನಿಲ್ಲಿಸದೇ ಇದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿ. ಕಾರಿನ ಚಾಲಕನ ತಪ್ಪಿನಿಂದ ಯಾವದೇ ಅಪಘಾತವಾಗಿಲ್ಲ ಬದಲಿಗೆ ಲಾರಿಯ ಚಾಲಕನ ತಪ್ಪಿನಿಂದಾಗಿದೆ ಎಂದರೆ ಸಾಕ್ಷಿಯು ಕಾರಿನ ಚಾಲಕನು ಸಹ ಕಾರನ್ನು ವೇಗವಾಗಿ ಓಡಿಸುತ್ತಿದ್ದ ಎನ್ನುತ್ತಾರೆ.

2. ನನ್ನ ಪ್ರಮಾಣ ಪತ್ರದಲ್ಲಿರುವ ಮಾಹಿತಿಯು ನನಗೆ ಗೊತ್ತಿರುತ್ತದೆ. ತಮ್ಮ ಬಿಡುಗಡೆ ಸಾರಾಂಶ ಪತ್ರದಲ್ಲಿ ತಮಗೆ ಯಾವದೇ ರೀತಿಯ ತೊಂದರೆ ಇಲ್ಲ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ್ವಲ್ಪ ತೊಂದರೆ ಇದೆ ಎನ್ನುತ್ತಾರೆ. ನನಗೆ ಈಗ ಕೆಲಸ ಮಾಡಲು ತೊಂದರೆ ಇರುವದಿಲ್ಲ ಆದರೆ 5 ನಿಮಿಷ ಮಾಡುವ ಕೆಲಸವನ್ನು 30 ನಿಮಿಷಗಳ ಕಾಲ ತೆಗೆದುಕೊಳ್ಳುತ್ತಿದ್ದೇನೆ. ತಾವು 5 ಲಕ್ಷ ರೂ ಗಳನ್ನು ಖರ್ಚು ಮಾಡಿರುತ್ತೀರಿ ಎಂದು ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ತಾವು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳು ಸೃಷ್ಟಿಸಿದವು ಎಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದಾಗಿರುವ ಕಾರಣ ಕಾರಿನ ವಿಮಾ ಕಂಪನಿಯು ಯಾವದೇ ರೀತಿಯ ಪರಿಹಾರ ಕೊಡಲು ಬಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ತಾವು ಮೊದಲಿನಂತೆ ಆರೋಗ್ಯವಾಗಿರುವ ಕಾರಣ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 4 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**<u>1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**MVC**-725/2022 **PW**: 3

**ದಿಃ 17.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಎ ಎಸ್ ಡಿ ವಕೀಲರಿಂದಃ**

1. ನನಗೆ ಪೊಲೀಸ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. ದೂರನ್ನು ಫಿರ್ಯಾದುದಾರರಾದ ಶ್ರೀಪೂರ್ಣ ನಾಯ್ಕ ರವರು ನೀಡಿರುತ್ತಾರೆಂದರೆ ಸರಿ. ಅಪಘಾತವು ಕಾರವಾರ-ಬಳ್ಳಾರಿ ಹೆದ್ದಾರಿಯಲ್ಲಿ ಆಗಿದೆ ಎಂದರೆ ಸರಿ. ಹೆದ್ದಾರಿಯಲ್ಲಿ ಯಾವದೇ ವಾಹನವನ್ನು ನಿಲ್ಲಿಸಬೇಕಾದರೂ ನಿಗದಿತ ಸ್ಥಳದಲ್ಲಿ ನಿಲ್ಲಿಸಬೇಕಾಗುತ್ತದೆಂದರೆ ಸರಿ. ಲಾರಿಯನ್ನು ರಸ್ತೆ ಮಧ್ಯಭಾಗದಲ್ಲಿ ನಿಲ್ಲಿಸಿದ ಕಾರಣ ಅಪಘಾತವಾಗಿದೆ ಎಂದು ದೂರನ್ನು ನೀಡಲಾಗಿದೆ ಎಂದರೆ ಸರಿ. ಲಾರಿಯನ್ನು ಯಾವದೇ ಮುನ್ಸೂಚನೆ ಇಲ್ಲದೇ ರಸ್ತೆಯಲ್ಲಿ ನಿಲ್ಲಿಸಿದ್ದ ಕಾರಣ ಅಪಘಾತವಾಗಿದೆ ಎಂದರೆ ಸರಿ. ಲಾರಿಯು ರಸ್ತೆ ಮಧ್ಯಬಾಗದಲ್ಲಿ ನಿಲ್ಲಿಸದೇ ಇದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿ. ಕಾರಿನ ಚಾಲಕನ ತಪ್ಪಿನಿಂದ ಯಾವದೇ ಅಪಘಾತವಾಗಿಲ್ಲ ಬದಲಿಗೆ ಲಾರಿಯ ಚಾಲಕನ ತಪ್ಪಿನಿಂದಾಗಿದೆ ಎಂದರೆ ಸಾಕ್ಷಿಯು ಕಾರಿನ ಚಾಲಕನು ಸಹ ಕಾರನ್ನು ವೇಗವಾಗಿ ಓಡಿಸುತ್ತಿದ್ದ ಎನ್ನುತ್ತಾರೆ.

2. ನಿಪಿ 32 ರಲ್ಲಿ ಮಾಡಿರುವ ಚಿಕಿತ್ಸೆಗೂ ಅಪಘಾತಕ್ಕೂ ಯಾವದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ತಮಗೆ ಯಾವದೇ ರೀತಿಯ ತೊಂದರೆಗಳು ಆಗದಿದ್ದರೂ ಈಗ ಪರಿಹಾರ ಪಡೆಯುವ ಉದ್ದೇಶಕ್ಕಾಗಿ ತೊಂದರೆ ಇದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 34 ರಲ್ಲಿ ತಾವು ಬಿಡುಗಡೆ ಹೊಂದುವಾಗ ಗುಣಮುಖರಾಗಿ ಬಿಡುಗಡೆ ಹೊಂದಿರುತ್ತೀರಿ ಎಂದು ಹೇಳಿ ಉಲ್ಲೇಖಿಸಲಾಗಿದೆ ಎಂದರೆ ಸರಿಯಲ್ಲ. ತಾವು ಹಾಜರುಪಡಿಸಿರುವ ಎಲ್ಲಾ ಮೆಡಿಕಲ್ಲ ಬಿಲ್ಲುಗಳು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿದ ದಾಖಲೆಗಳಾಗಿರುತ್ತವೆಂದರೆ ಸರಿಯಲ್ಲ. ಅಪಘಾತವು ಲಾರಿ ಚಾಲಕನ ತಪ್ಪಿನಿಂದಾಗಿರುವ ಕಾರಣ ಕಾರಿನ ವಿಮಾ ಕಂಪನಿಯು ಯಾವದೇ ರೀತಿಯ ಪರಿಹಾರ ಕೊಡಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ. ತಾವು ಮೊದಲಿನಂತೆ ಆರೋಗ್ಯವಾಗಿರುವ ಕಾರಣ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 4 ನೇ ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**